ನೀರಾವರಿ ಕಾಮಗಾರಿಕೆಗಳನ್ನು ನಿಲ್ಲಿಸಿರುವ ಬಗ್ಗೆ.

ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ತಾಲ್ಲೂಕು ಶ್ರೀಮಂಗಲನಾಡು ಲಕ್ಷ್ಮಣ ತೀರ್ಥಕ್ಕೆ ಅಡ್ಡವಾಗಿ ಒಡ್ಡು ಕಟ್ಟಲು ಯೋಜನೆಯೊಂದನ್ನು ರೂಪಿಸಿದ್ದು ನಿಜವಲ್ಲವೇ ?

ಆ) ಸದರಿ ಯೋಜನೆಗೆ ಮಂಜೂರಾದ ಹಣವೆಷ್ಟು ಹಾಗೂ ಖರ್ಚಾದ ಹಣವೆಷ್ಟು ?

ಇ) ಸದರಿ ಯೋಜನೆಯ ಕಾರ್ಯ ಅರ್ಧಕ್ಕೆ ನಿಂತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ಹಾಗೂ ಪುನಃ ಯಾವಾಗ ಪ್ರಾರಂಭಿಸಲಾಗುವುದು ?

ಉ) ಚಿಕ್ಕಸಡ್ಲೂರು, ಶೀರೆಹೊಳೆ ಏತ ನೀರಾವರಿ ಯೋಜನೆಯ ಕೆಲಸ ಪ್ರಾರಂಭವಾದದ್ದು ಯಾವಾಗ ಹಾಗೂ ಅದನ್ನು ಅರ್ಧಕ್ಕೆ ನಿಲ್ಲಿಸಲು ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ರೂ. ೩೦.೪೨ ಲಕ್ಷ ಮತ್ತು ರೂ. ೧೧.೮೨ ಲಕ್ಷ.

ಇ) ಬಂದಿದೆ.

ಈ) ಇನ್ನೂ ಹೆಚ್ಚಿನ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲು ಯೋಚಿಸಿ ನಿಲ್ಲಿಸಲಾಯಿತು. ಕಾವೇರಿ ಜಲಾನಯನ ಪ್ರದೇಶದ ಮಾಸ್ಟರ್ ಪ್ಲಾನ್‌ನಲ್ಲಿ ಅಡಕಗೊಳಿಸಿ ಪರಿಶೀಲನೆಯಲ್ಲಿದೆ.

ಉ) ಕೆಲಸ ಪ್ರಾರಂಭವಾಗಿಲ್ಲವಾದ್ದರಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಪೂರ್ಣ ಚರ್ಚೆ ನಡೆದಿದೆ. ಹಿಂದೆ ಕೊಡಗು ಸರ್ಕಾರ ಇದ್ದಂಥ ಕಾಲದಲ್ಲಿ ರೂಪಿಸಿದ್ದು. ಇದು ಹಲವಾರು ಸ್ಟೇಜ್‌ನಲ್ಲಿ, ಹಲವಾರು ನಿರ್ಣಯಗಳಲ್ಲಿ ಆಗಿವೆ. ಈ ಕೆಲಸ ಮಾಡಕೂಡದೆಂದು ೧೦-೨-೧೯೭೯ರಲ್ಲಿ, ೩-೩-೧೯೭೯ರಲ್ಲಿ, ೯-೬-೧೯೭೯ರಲ್ಲಿ ಸಾಕಷ್ಟು ಆಂದೋಳನಗಳು ನಡೆದಿದೆ, ಪ್ರತಿಭಟನೆಗಳಾಗಿವೆ ಹಿಂದಿನ ಸರ್ಕಾರ, ಇದನ್ನು ನಿಲ್ಲಿಸುವುದರ ಬಗ್ಗೆ ಒಂದು ಸೂಚನೆ ಮಾಡಿದ್ದಾರೆ. ನಾನು ಹಳೇ ಕಡತ ಹುಡುಕಿ ನೋಡಿದೆ. ನೀರಾವರಿ ಬಗ್ಗೆ ಇರತಕ್ಕ ಪೆಂಡಿಂಗ್ ಫೈಲುಗಳ ರಿವ್ಯೂ ಮಾಡಿದೆ. ಇದು ನನ್ನ ಗಮನಕ್ಕೆ ಬಂದಿರಲಿಲ್ಲ. ಹಳೆ ರೆಕಾರ್ಡ್ ಹುಡುಕಬೇಕಾಗಿ ಬಂತು. ಇವುಗಳ ಪರಿಶೀಲನೆ ಮಾಡಿದಾಗ, ಹಿಂದಿನ ಸರ್ಕಾರ ನಿಲ್ಲಿಸಬೇಕೆಂದು ನಿರ್ಣಯ ಮಾಡಿದೆ. ಇದು ಈ ಪರಿಸ್ಥಿತಿಯಲ್ಲಿದೆ.

ಶ್ರೀಮತಿ ಸುಮಾ ವಸಂತ.—ಮಾನ್ಯ ಅಧ್ಯಕ್ಷರೇ, ಚಿಕ್ಕಸಡ್ಲೂರು, ಶೀರೆಹೊಳೆ ಏತ ನೀರಾವರಿ ಯೋಜನೆಯ ಕೆಲಸ ಪ್ರಾರಂಭವಾಗಿದ್ದು ಹಿಂದೆ ಅನೇಕ ಕಡೆ ಚಾನಲ್ ತೋಡಿ, ಆ ಕೆಲಸ ಹಾಗೆಯೇ ಅಲ್ಲಿಗೇ ನಿಂತಿದೆ. ಇದರ ಬಗ್ಗೆ ಸರ್ಕಾರ ಏನಾದರೂ ಹಣ ಒದಗಿಸಿ, ಕೆಲಸ ಮುಂದುವರಿಸುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಕೆಲಸ ಮಾಡುವುದರ ಬಗ್ಗೆ ತೊಂದರೆ ಇದೆ. ಮುಳುಗಡೆ ಯಾಗುತ್ತದೆ, ಮಾಡಕೂಡದು ಎಂದು ಕೊಡಗಿನಲ್ಲಿ. Protest meeting was held at Srimangala which was addressed by Sri A. K. Subbaiah. Protest meeting was held at Srimangala addressed by Kurumbaiah, Mr. M. C. Nanaiah, Sri A. K. Subbaiah and Smt. Jaji Mandanna. ಇದಕ್ಕೆ ಆ ಪಕ್ಷ, ಈ ಪಕ್ಷ ಎಂದಲ್ಲ, ಎಲ್ಲರೂ ಮಾಡಿದ್ದಾರೆ. ಇದರ ಬಗ್ಗೆ ನೀವು ಮಾಡಬೇಕೆಂದು ಹೇಳುವುದಾದರೆ, ಜನರ ಸಮ್ಮತಿ ಕೊಡಿಸುವುದಾದರೆ ಮಂರು ಚಿಂತನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಇದು ಯೋಗ್ಯ ಎಂದು ಕಂಡು ಬಂದರೆ, ನಿಮ್ಮ ಹೃದಯಕ್ಕೆ ಹಾಗೂ ಸರ್ಕಾರಕ್ಕೆ ಯೋಗ್ಯ ಎಂದೂ ಕಂಡು ಬಂದರೆ, ನೀವು ಪ್ರಯತ್ನ ಮಾಡಬಹುದಲ್ಲಾ ?

ಶ್ರೀ ಹೆಚ್. ಡಿ. ದೇವೇಗೌಡ.—ಯೋಗ್ಯವಾದ ಪ್ರಾಜೆಕ್ಟ್ ಎಂದೂ ಹೇಳುವುದರಲ್ಲಿ ತಕರಾರು ಏನೂ ಇಲ್ಲ. ಆದರೆ ಮುಳುಗಡೆಯಾಗುತ್ತದೆ ಎಂದೂ ದೊಡ್ಡ ಗಲಾಟೆಯಾಗಿ. ಹಿಂದಿನ ಮುಖ್ಯಮಂತ್ರಿಗಳು ಕೊಡಗಿನವರೇ ಆದರೂ ತಡೆಹಿಡಿಯಿರಿ ಎಂದೂ ಹೇಳಿದ್ದಾರೆ. ಇದರ ಬಗ್ಗೆ ಮರು ಚಿಂತನೆ ಮಾಡುತ್ತೇನೆ.

ಶ್ರೀಮತಿ ಸುಮಾ ವಸಂತ.—ಇಲ್ಲಿ ಮಳೆ ನೀರನ್ನೇ ನಂಬಿಕೊಂಡು ವ್ಯವಸಾಯ ಮಾಡಬೇಕಾಗಿದೆ. ಕಾವೇರಿ ನದಿ ಹರಿಯುತ್ತಿದ್ದರೂ ಪ್ರಯೋಜನವಿಲ್ಲ. ತಾವು ನೀರಾವರಿಗೋಸ್ಕರ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಇಲ್ಲಿ ಒಂದು ಲಿಫ್ಟ್ ಇರಿಗೇಷನ್ ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುತ್ತಿದ್ದೀರಿ, ಎಲ್ಲಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಿದರೆ, ಆದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಮುಚ್ಚಲಾದ ಶಾಲೆಗಳು ಹಾಗೂ ಮಹಾವಿದ್ಯಾಲಯಗಳು

೩೪೮. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಕೆಲವು ಶಾಲೆಗಳನ್ನು ಮುಚ್ಚಲು ಸರ್ಕಾರದವರು ಆದೇಶ ನೀಡಿರುವುದು ನಿಜವೇ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು). ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಮಾಹಿತಿಯನ್ನೊದಗಿಸುವುದು ?

ಇ) ಸದರಿ ಶಾಲಾ ಕಾಲೇಜುಗಳನ್ನು ಮುಚ್ಚಲು ಆದೇಶ ನೀಡಿರುವುದಕ್ಕೆ ಕಾರಣಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಸಚಿವರು).—

ಅ)	ಸರ್ಕಾರ	ಖಾಸಗಿ
ಪ್ರೌಢ ಶಾಲೆಗಳು	೧೪೬೬	೨೬೫೭
ಪದವಿಪೂರ್ವ ಕಾಲೇಜುಗಳು	೩೮೧	೪೬೦

ಆ) ಮುಚ್ಚಲೆಂದು ಸರ್ಕಾರಿ ಆದೇಶ ಹೊರಡಿಸಿರುವ ಖಾಸಗಿ ಪ್ರಾಥಮಿಕ ಪ್ರೌಢಶಾಲೆಯಾವುವೂ ಇಲ್ಲ. ಆದರೆ ಇದುವರೆವಿಗೂ ಎರಡು ಸರ್ಕಾರಿ ಪದವಿಪೂರ್ವ ಕಾಲೇಜನ್ನು ಮುಚ್ಚಲು ಸರ್ಕಾರ ಆದೇಶ ಹೊರಡಿಸಿದೆ.

೧ ಸರ್ಕಾರಿ ಪದವಿಪೂರ್ವ ಕಾಲೇಜು ಇಲವಾಲ ಮೈಸೂರು ಜಿಲ್ಲೆ

೨ ಸರ್ಕಾರಿ ಪದವಿಪೂರ್ವ ಕಾಲೇಜು ಕುಂದೂರು ಮಠ ಹಾಸನ ಜಿಲ್ಲೆ

ಇ) ಸದರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೦ಕ್ಕಿಂತ ಕಡಿಮೆ ಇರುವುದರಿಂದ ಅವುಗಳನ್ನು ಸ್ಥಳಾಂತರಿಸಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇವರಿಗೆ ಸರಿಯಾದ ಮಾಹಿತಿ ದೊರೆತಿರಲಿಕ್ಕಿಲ್ಲ. ನಾನು ಇತ್ತೀಚೆಗೆ ಟೂರ್ ಹೋಗಿದ್ದಾಗ, ರಾಯಚೂರು ಡಿಸ್ಟ್ರಿಕ್ಟ್ ದೇವದುರ್ಗಕ್ಕೆ ಹೋಗಿದ್ದೆ. ಅಲ್ಲಿ ಇದ್ದದ್ದು ಒಂದೇಒಂದು ಜೂನಿಯರ್ ಕಾಲೇಜ್, ಅದನ್ನು ಮುಚ್ಚಿದ್ದಾರೆ.